**DAY & DATE: SATURDAY, NOVEMBER 15th, 2025**

**Matter: Distribution of Scholarships to Students of BNMIT**

**As appeared in the Newspapers:**

**VIJAYAVANI**
(Bengaluru City Express, Page No.12)

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಕಲಿಯಿರಿ, ಸಮಾಜಕ್ಕೆ ಕೊಡುಗೆ ನೀಡಿ

## ವಿದ್ಯಾರ್ಥಿಗಳಿಗೆ ಕಿವಿಮಾತು | ಬಿಎನ್‌ಎಂಐಟಿಯಲ್ಲಿ ವಿದ್ಯಾರ್ಥಿವೇತನ ವಿತರಣೆ

ವಿಜಯವಾಣಿ ಚಿತ್ರ



ಬಿಎನ್‌ಎಂಐಟಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಬಂಡೆ, ಸೀತಾರಾಮ್ ಅನಂತನಾರಾಯಣ್, ಡಾ. ಎಸ್.ವೈ. ಕುಲಕರ್ಣಿ, ನಾರಾಯಣರಾವ್ ಮಾನೆ, ಡಾ. ಜಿ.ಎನ್. ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

**ಬೆಂಗಳೂರು:** ವಿದ್ಯಾರ್ಥಿಗಳು ಕಲಿಯಬೇಕು, ಆ ನಂತರ ದುಡಿಯಬೇಕು. ಇದರಲ್ಲಿ ಸ್ವಲ್ಪ ಹಣವನ್ನು ಸಮಾಜದ ಒಳಿತಿಗಾಗಿ ವೆಚ್ಚ ಮಾಡಬೇಕು ಎಂದು ಎನ್‌ಎಕ್ಸ್‌ಪಿ ಸೆಮಿಕಂಡಕ್ಟರ್ ಕಂಪನಿ ನಿರ್ದೇಶಕ ಮಲ್ಲಿಕಾರ್ಜುನ ಬಂಡೆ ಹೇಳಿದ್ದಾರೆ.

ಬಿಎನ್‌ಎಂಐಟಿನ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನ ವಿತರಿಸಿ ಮಾತನಾಡಿದರು. ನಮ್ಮ ಕಾಲದಲ್ಲಿ ಇದ್ದ ರೀತಿ ಯಾವುದೂ ಇಲ್ಲ. ಅದು ಕೆಲಸ ಇರಬಹುದು, ತಂತ್ರಜ್ಞಾನ ಇರಬಹುದು. ಎಲ್ಲವೂ ಅಪ್‌ಡೇಟ್ ಆಗುತ್ತಲೇ ಇದೆ. ಇದಕ್ಕೆ ನಾವು ಕೂಡ ಸರಿಯಾಗಿ ಅಪ್‌ಡೇಟ್ ಆಗಬೇಕಿದೆ ಎಂದರು.

ಭವಿಷ್ಯದಲ್ಲಿ ಯಾವ ರೀತಿಯ ಉದ್ಯೋಗ ಸೃಷ್ಟಿಯಾಗಲಿದೆ ಎಂಬುದು ಯಾರಿಗೂ ತಿಳಿದಿಲ್ಲ. ನೀವು ಇನ್ನೂ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೀರಿ. ಕಲಿಯುವುದಕ್ಕೆ ಇದೇ ಸೂಕ್ತ ಸಮಯ. ಸಾಧ್ಯವಾದಷ್ಟು ಕಲಿಯಿರಿ ಎಂದು ಹೇಳಿದರು.

> ಅಂಕಗಳಿಂದಲೇ ಎಲ್ಲವನ್ನೂ ಅಳೆಯಲು ಸಾಧ್ಯವಿಲ್ಲ. ಜ್ಞಾನ ಸಂಪಾದನೆ ಮುಖ್ಯ. ಶೈಕ್ಷಣಿಕವಾಗಿ ಮುಂದಿರುವ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾರ್ಥಿವೇತನ ನೀಡುತ್ತಿದ್ದೇವೆ. ವಿದ್ಯಾರ್ಥಿಗಳ ಸಾಧನೆಗೆ ಶ್ರಮ ವಹಿಸಿದ ಬೋಧಕರನ್ನೂ ಗುರುತಿಸಿ ಪ್ರೋತ್ಸಾಹಧನ ನೀಡುತ್ತಿದ್ದೇವೆ.
>
> | ನಾರಾಯಣ ರಾವ್ ಆರ್. ಮಾನೆ
> ಬಿಎನ್‌ಎಂಐಟಿ ಅಧ್ಯಕ್ಷ

ಇಂಪ್ಯಾಕ್ಟ್ ಯುನೈಟೆಡ್ ವೇ ಕಂಪನಿಯ ನಿರ್ದೇಶಕ ಸೀತಾರಾಮ್ ಅನಂತನಾರಾಯಣ್ ಮಾತನಾಡಿ, ನಾವು ಓದುವ ವೇಳೆ ಇದ್ದ ಕಷ್ಟಗಳು ಇಂದಿಲ್ಲ. ಎಲ್ಲರೂ ತಂತ್ರಜ್ಞಾನದ ಮೇಲೆ ಅವಲಂಬಿತರಾಗಿದ್ದಾರೆ. ಎಲ್ಲದಕ್ಕೂ ನಾವು ಗೂಗಲ್, ಚಾಟ್ ಜಿಪಿಟಿಗಳು ನಿಮ್ಮ ಬೆಳವಣಿಗೆಗಳನ್ನು ಕುಂಠಿತಗೊಳಿಸುವುದಿಲ್ಲ. ಬದಲಾಗಿ ಮತ್ತಷ್ಟು ತಿದ್ದುವ ಕೆಲಸ ಮಾಡಲಿದೆ. ನನ್ನ ಕಂಪನಿಯಿಂದ ಈ ವರ್ಷದಿಂದಲೇ 6 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದಾಗಿ ಭರವಸೆ ನೀಡಿದರು.

ಶೈಕ್ಷಣಿಕ, ಕ್ರೀಡಾ, ಎನ್‌ಸಿಸಿ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಸೇರಿ ಎಲ್ಲ ವಿಭಾಗದಿಂದ 464 ವಿದ್ಯಾರ್ಥಿಗಳಿಗೆ 1 ಕೋಟಿ ರೂ. ಮೌಲ್ಯದ ವಿದ್ಯಾರ್ಥಿವೇತನ ವಿತರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ವೈ. ಕುಲಕರ್ಣಿ, ಬಿಎನ್‌ಎಂಐಟಿ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ, ಕಾಲೇಜಿನ ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ, ನಿರ್ದೇಶಕ ಪ್ರೊ. ಟಿ. ಜೆ. ರಾಮಮೂರ್ತಿ ಉಪಸ್ಥಿತರಿದ್ದರು.